## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 24, ಫ್ರಾ.ಸಾಃ 13**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಎಸ್. ಆರ್. |
| ತಂದೆಯ ಹೆಸರು | ರಾಮಚಂದ್ರಮೂರ್ತಿ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಪೋಲೀಸ್ ತರಬೇತಿ ಶಾಲೆ, ಕಡೂರು |
| ವಾಸ್ತವ್ಯ | ಕಡೂರು |

**ಸಾಕ್ಷಿಯನ್ನು ದಿನಾಂಕಃ 24-10-2024ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಕ್ಟೋಬರ್-2020 ರಿಂದ ಜನವರಿ-2023ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **03-10-2020**ರಂದು ಚಾಸಾ-23ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 10-10-2020ರಂದು ಘಟನಾ ಸ್ಥಳದ ಉತಾರ ಪೂರೈಸುವಂತೆ ಚಂದಾವರ ಪಿಡಿಒ ರವರಿಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ದಿನಾಂಕ 11-10-2020ರಂದು ಘಟನಾ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪಿಡಬ್ಲುಡಿಯ ಎಇಇ ರವರಿಗೆ ಪತ್ರ ಬರೆದಿರುತ್ತೇನೆ. ಈಗ ನೋಡುತ್ತಿದ್ದು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

ದಿನಾಂಕ 20-10-2020ರಂದು ಕುಮಟಾ ಶಾಖೆಯ ಮಣಪುರಂ ಫೈನಾನ್ಸರವರಿಗೆ ಆರೋಪಿತರು ಚಿನ್ನಾಭರಣಗಳನ್ನು ಅಡವಿಟ್ಟ ಬಗ್ಗೆ ದಾಖಲೆ ಪೂರೈಸುವಂತೆ ನೋಟೀಸು ನೀಡಿರುತ್ತೇನೆ. ಸದರಿ ನೋಟೀಸಗಳನ್ನು ಈಗ ನೋಡುತ್ತಿದ್ದು ನಿಪಿ-23 ಮತ್ತು 24 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-23(ಎ) ಮತ್ತು 24(ಎ) ಎಂದು ಗುರುತಿಸಲಾಯಿತು.

ದಿನಾಂಕ 24-10-2020ರಂದು ಕುಮಟಾ ನೆಲ್ಲಿಕೇರಿ ಶಾಖೆಯ ಮಣಪುರಂ ಫೈನಾನ್ಸನವರು ಒಂದು ಪತ್ರದ ಮೂಲಕ ಆಧಾರ ಕಾರ್ಡ, ಇನ್ವೆಂಟರಿ, ಗ್ರಾಹಕರ ಪಟ್ಟಿ ಮತ್ತು ಚಿನ್ನಾಭರಣಗಳನ್ನು ಅಡವಿಟ್ಟ ದಾಖಲೆಗಳನ್ನು ಪೂರೈಸಿರುತ್ತಾರೆ. ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು

ಗುರುತಿಸಲಾಯಿತು. ಚಿನ್ನಾಭರಣಗಳನ್ನು ಗಿರವಿ ಇಟ್ಟ ಬಗ್ಗೆ ಹಾಜರುಪಡಿಸಿದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ–26 ಎಂದು ಗುರುತಿಸಲಾಯಿತು. (ನಿಪಿ–26ರ ದಾಖಲೆ 13 ಹಾಳೆಗಳನ್ನು ಒಳಗೊಂಡಿರುತ್ತದೆ.)

ಅದೇ ದಿನ ಕುಮಟಾ ಶಾಖೆಯ ಮಣಪುರಂ ಫೈನಾನ್ಸನವರು ಒಂದು ಪತ್ರದ ಮೂಲಕ ಗುರುತಿನ ಚೀಟಿ, ಇನ್ವೆಂಟರಿ, ಗ್ರಾಹಕರ ಪಟ್ಟಿ ಮತ್ತು ಚಿನ್ನಾಭರಣಗಳನ್ನು ಅಡವಿಟ್ಟ ದಾಖಲೆಗಳನ್ನು ಪೂರೈಸಿರುತ್ತಾರೆ. ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ–27 ಎಂದು, ಸಾಕ್ಷಿಯ ಸಹಿಯನ್ನು ನಿಪಿ–27(ಎ) ಎಂದು ಗುರುತಿಸಲಾಯಿತು. ಚಿನ್ನಾಭರಣಗಳನ್ನು ಗಿರವಿ ಇಟ್ಟ ಬಗ್ಗೆ ಹಾಜರುಪಡಿಸಿದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ–28 ಎಂದು ಗುರುತಿಸಲಾಯಿತು. (ನಿಪಿ–28ರ ದಾಖಲೆ 9 ಹಾಳೆಗಳನ್ನು ಒಳಗೊಂಡಿರುತ್ತದೆ.)

ದಿನಾಂಕ 09–11–2020ರಂದು ಪಿಡಬ್ಲುಡಿಯ ಎಇಇ ರವರು ಒಂದು ಪತ್ರ ಮತ್ತು ಸ್ಥಳದ ಕಚ್ಚಾ ನಕಾಶೆಯನ್ನು ಪೂರೈಸಿರುತ್ತಾರೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ–29 ಮತ್ತು 30 ಎಂದು ಗುರುತಿಸಲಾಯಿತು.

ಅದೇ ದಿನ ಚಂದಾವರ ಪಿಡಿಓ ರವರು ಘಟನಾ ಸ್ಥಳದ ಉತಾರ ಪೂರೈಸಿದ್ದು ಅದನ್ನು ನಿಪಿ–31 ಎಂದು ಗುರುತಿಸಲಾಯಿತು. ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ</u>**

ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದಿಲ್ಲ. ಮಣಪುರಂ ಫೈನಾನ್ಸನವರು ಒದಗಿಸಿರುವ ದಾಖಲೆಗಳಲ್ಲಿ ಆರೋಪಿತರ ಸಹಿ ಇಲ್ಲ ಎಂದರೆ ಸರಿಯಲ್ಲ. ನಿಪಿ–26ನ್ನು ನಾನು ಪರಿಶೀಲಿಸಿದ್ದೇನೆ. ಎಇಇ ರವರು ಪೂರೈಸಿರುವ ನಕಾಶೆಯ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ಆದರೆ ನಕಾಶೆ ತಯಾರಿಸುವ ಕಾಲಕ್ಕೆ ಸಹಾಯಕ್ಕಾಗಿ ಚಾಸಾ–16 ಸಿಬ್ಬಂದಿಯನ್ನು ಕಳುಹಿಸಿರುತ್ತೇನೆ. ನಿಪಿ–31ರ ಸ್ಥಳಕ್ಕೂ ಸಹ ನಾನು ಭೇಟಿ ನೀಡಿಲ್ಲ. ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದೇ ಇದ್ದರೂ ಸಹ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**